# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 40(12) |
| **ಮಾನ್ಯ ಸದಸ್ಯರ ಹೆಸರು** | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | 04.12.2023 |
| **ಉತ್ತರಿಸುವ ಸಚಿವರು** | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ವಿವಿಧ ಹಂತದ ಆರೋಗ್ಯ ಕೇಂದ್ರ ಹಾಗೂ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ನೀಡಲಾಗುತ್ತಿರುವ ಆರೋಗ್ಯ ಸೇವೆಗಳಾವುವು: ಉಚಿತ ಸೇವೆ ಹಾಗೂ ವಿತರಣೆಗಳಿಗೆ ಅಗತ್ಯವಿರುವ ಕುಟುಂಬ ಯೋಜನಾ ಔಷಧಿ ಮತ್ತು ಸಾಧನಗಳ ಸಹಿತ ಎಲ್ಲಾ ವೈದ್ಯಕೀಯ ಸೌಕರ್ಯಗಳು ಲಭ್ಯವಿದೆಯೇ: (ಕೇಂದ್ರುವಾರು ಹಾಗೂ ಸೌಲಭ್ಯವಾರು ಯೋಜನೆಗಳ ಮಾಹಿತಿ ನೀಡುವುದು) | ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ನಮ್ಮ ಕ್ಲಿನಿಕ್ ಗಳಲ್ಲಿ ಈ ಕೆಳಕಂಡಂತೆ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತಿದೆ.<br><br>1. ಗರ್ಭಿಣಿ ಮತ್ತು ಜನನ ಸಮಯದ ಆರೈಕೆ.<br>2. ನವಜಾತ ಮತ್ತು ಶಿಶುವಿನ ಸಮಗ್ರ ಆರೋಗ್ಯ ಆರೈಕೆ.<br>3. ಬಾಲ್ಯ ಮತ್ತು ಹದಿಹರೆಯದವರಿಗೆ ಸಮಗ್ರ ಆರೋಗ್ಯ ಸೇವೆಗಳು.<br>4. ಸಾರ್ವತ್ರಿಕ ಲಸಿಕಾಕರಣ ಸೇವೆಗಳು.<br>5. ಕುಟುಂಬ ಕಲ್ಯಾಣ, ಗರ್ಭನಿರೋಧಕ ಸೇವೆಗಳು ಮತ್ತು ಇತರ ಸಂತಾನೋತ್ಪತ್ತಿ ಆರೋಗ್ಯ ಸೇವೆಗಳು.<br>6. ಸಾಂಕ್ರಾಮಿಕ ರೋಗಗಳ ನಿರ್ವಹಣೆ.<br>7. ಸಾಮಾನ್ಯ ಮತ್ತು ಸಣ್ಣ ಪ್ರಮಾಣದ ಖಾಯಿಲೆಗಳಿಗೆ ಹೊರರೋಗಿ ಸೇವೆಗಳು.<br>8. ಸಾಂಕ್ರಾಮಿಕ (ಟಿ.ಬಿ.,ಕುಷ್ಠ ಇತ್ಯಾದಿ) ಮತ್ತು ಅಸಾಂಕ್ರಾಮಿಕ ರೋಗಗಳ (ಮಧುಮೇಹ, ಹೆಚ್ಚು ರಕ್ತದೊತ್ತಡ, ದೀರ್ಘಾವಧಿ ಶ್ವಾಸಕೋಶ ಕಾಯಿಲೆ, ಕೀಲು ನೋವು ಮತ್ತು ಸಂಧಿವಾತ, ಬಾಯಿ, ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್ ಇತ್ಯಾದಿ) ಸ್ಕ್ರೀನಿಂಗ್, ತಡೆಗಟ್ಟುವಿಕೆ ಮತ್ತು ನಿರ್ವಹಣೆ<br>9. ಮೂಲಭೂತ ಬಾಯಿ ಆರೋಗ್ಯ ಸೇವೆಗಳು<br>10. ಮೂಲಭೂತ ನೇತ್ರ ಹಾಗೂ ಕಿವಿ, ಮೂಗು, ಗಂಟಲು ಆರೋಗ್ಯ ಆರೈಕೆ ಸೇವೆಗಳು<br>11. ಮಾನಸಿಕ ಆರೋಗ್ಯದ ಮೂಲಭೂತ ಸ್ಕ್ರೀನಿಂಗ್ ಸೇವೆಗಳು.<br>12. ಮೂಲಭೂತ ವೃದ್ಧಾಪ್ಯ ಆರೈಕೆ ಮತ್ತು ಉಪಶಮನಕಾರಿ ಆರೈಕೆ ಸೇವೆಗಳು. |

13. ಸುಟ್ಟ ಗಾಯಗಳು, ಅಪಘಾತ, ಮತ್ತಿತರ ಗಾಯಗಳು ಸೇರಿದಂತೆ ತುರ್ತು ವೈದ್ಯಕೀಯ ಸೇವೆಗಳು.

- ಆರೋಗ್ಯ ಕ್ಷೇಮ ಚಟುವಟಿಕೆಗಳು
- ಉಚಿತ ಆರೋಗ್ಯ ತಪಾಸಣೆ
- ಉಚಿತ ಚಿಕಿತ್ಸೆ
- ಉಚಿತ ಪ್ರಯೋಗ ಶಾಲಾ ಸೇವೆಗಳು (ರಕ್ತಹೀನತೆ, ಸಕ್ಕರೆ ಖಾಯಿಲೆ, ಮೂತ್ರಪರೀಕ್ಷೆ, ಕ್ಷಯ, ಗರ್ಭದಾರಣ ಪರೀಕ್ಷೆ, ಡೆಂಗ್ಯೂ, ಮಲೇರಿಯಾದಂತಹ ಕನಿಷ್ಠ-14 ಪರೀಕ್ಷೆಗಳು)
- ಟೆಲಿಕನ್ಸಲ್‌ಟೇಷ್ ಸೇವೆಗಳು.
- ಉಚಿತ ರೆಫರಲ್ ಸೇವೆಗಳು

**1. Integrated Disease Surveillance Program (IDSP)**

ಭಾರತ ಸರ್ಕಾರವು NHM ಅಡಿಯಲ್ಲಿ ಸಾಂಕ್ರಾಮಿಕ ರೋಗಗಳ ರೋಗ ಪತ್ತೆ ಹಚ್ಚುವಿಕೆಗಾಗಿ ರಾಜ್ಯದ 20 ಜಿಲ್ಲಾ ಸರ್ವೆಲೆನ್ಸ್ ಪ್ರಯೋಗಾಲಯಗಳನ್ನು ಜಿಲ್ಲಾ ಆಸ್ಪತ್ರೆಯಲ್ಲಿ District Public Health Laboratory (DPHL) ಎಂಬ ಹೆಸರಿನಲ್ಲಿ ಮೇಲ್ದರ್ಜೆಗೇರಿಸುವ ಮುಖಾಂತರ ಈ ಕೆಳಕಂಡ ಪ್ರಯೋಗ ಶಾಲಾ ಸೇವೆಗಳನ್ನು ನೀಡಲಾಗುತ್ತಿದೆ.

1. ಕಲ್ಚರ್ & ಸೆನ್ಸಿಟಿವಿಟಿ ಪರೀಕ್ಷೆ:-
ಕಾಲರಾ, ಟೈಫಾಯಿಡ್, ಡಿಫ್ತೀರಿಯಾ

2. ಸೀರಾಲಜಿ ಪರೀಕ್ಷೆ:

ಡೆಂಗ್ಯೂ, ಚಿಕನ್‌ಗುನ್ಯಾ, ಮೆದುಳುಜ್ವರ,ಹೆಪಟೈಟಿಸ್ ಎ& ಇ ಲೆಪ್ಟೋಸ್ಪೈರಾ, ರಿಕೆಟ್ಸಿಯಲ್ ಜ್ವರ, ಬ್ರುಸೆಲ್ಲೋಸಿಸ್ ಇತ್ಯಾದಿ.

- DPHL ಲಭ್ಯವಿಲ್ಲದಿರುವ ಜಿಲ್ಲೆಗಳನ್ನು ರಾಜ್ಯದ ಆಯ್ದ 08 ವೈದ್ಯಕೀಯ ಮಹಾವಿದ್ಯಾಲಯಗಳ ಮೈಕ್ರೋ ಬಯಾಲಜಿ ವಿಭಾಗದಲ್ಲಿನ ಭಾರತ ಸರ್ಕಾರದ NHM ಅಡಿಯಲ್ಲಿ Referral Labಗೆ ಸಂಪರ್ಕಿಸಿ ಮೇಲ್ಕಂಡ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

- ಉಳಿದ 11 ಜಿಲ್ಲೆಗಳಲ್ಲಿನ ಜಿಲ್ಲಾ ಸರ್ವೆಲೆನ್ಸ್ ಪ್ರಯೋಗಾಲಯಕ್ಕೆ ಭಾರತ ಸರ್ಕಾರದಿಂದ ಅನುದಾನ ಲಭ್ಯವಿರುವುದಿಲ್ಲವಾದ್ದರಿಂದ ಕೇವಲ ಡೆಂಗ್ಯೂ, ಚಿಕನ್ ಗುನ್ಯಾ ಪತ್ತೆಗಾಗಿ ಪರೀಕ್ಷೆ ನಡೆಸಲಾಗುತ್ತಿದೆ ಹಾಗೂ Referral Labಗೆ ಸಂಪರ್ಕಿಸಲಾಗಿದೆ.

**2. Nation Rabies Control Program (NRCP)**

- ಎಲ್ಲಾ ನಾಯಿಕಡಿತ ಪ್ರಕರಣಗಳಿಗೆ ಉಚಿತ Anti Rabies Vaccine (ARV) ಹಾಗೂ Rabies Immunoglobulin (RLG) ಮೂಲಕ ಚಿಕಿತ್ಸೆ ನೀಡಲಾಗುತ್ತಿದೆ.

**3. Snake Bite Prevention & Control Program (SBP&CP)**

ಎಲ್ಲಾ ಹಾವು ಕಡಿತ ಪ್ರಕರಣಗಳಿಗೆ ಉಚಿತ Anti Snake Venum (ASV) ಮೂಲಕ ಚಿಕಿತ್ಸೆ ನೀಡಲಾಗುತ್ತಿದೆ.

**4. Nation Program For the Prevention and Control Of Leptospirosis (NPPCL)**

1. ಶಂಕಿತ ಪ್ರಕರಣಗಳಿಂದ ಮಾದರಿ ಸಂಗ್ರಹಿಸಿ DPHL/ Referral Lab ಗಳಲ್ಲಿ ಪರೀಕ್ಷೆಗೊಳಪಡಿಸಲಾಗುತ್ತಿದೆ.

ರಾಜ್ಯದ ವಿವಿಧ ಹಂತದ ಆರೋಗ್ಯ ಕೇಂದ್ರ ಹಾಗೂ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿಯಲ್ಲಿ ಬಿಸಿಜಿ, ಹೆಪಟೈಟೀಸ್-ಬಿ, ಒಪಿವಿ, ರೋಟಾ, ಐಪಿವಿ, ಪೆಂಟಾವಲೆಂಟ್, ಪಿಸಿವಿ, ದಢಾರ-ರುಬೆಲ್ಲಾ, ಜೆಇ (ಆಯ್ದ ಜಿಲ್ಲೆಗಳಲ್ಲಿ ಮಾತ್ರ), ವಿಟಮಿನ್-ಎ, ಡಿಪಿಟಿ ಹಾಗೂ ಟಿಡಿಲಸಿಕೆಗಳನ್ನು 0-16 ವರ್ಷದ ಅರ್ಹ ಮಕ್ಕಳಿಗೆ ನೀಡಲಾಗುತ್ತಿದೆ. ಗರ್ಭಿಣಿ ಸ್ತ್ರೀಯರಿಗೆ ಟಿಡಿ ಲಸಿಕೆಯನ್ನುನೀಡಲಾಗುತ್ತಿದೆ. ಈ ಎಲ್ಲಾ ಲಸಿಕೆಗಳನ್ನು ಉಚಿತವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವಾರಕ್ಕೊಮ್ಮೆ ನಿಗಧಿತ ದಿನಗಳಂದು,

ಸಮುದಾಯ ಆರೋಗ್ಯ ಕೇಂದ್ರ ತಾಲ್ಲೂಕು ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರತಿ ದಿನ ನೀಡಲಾಗುತ್ತಿದೆ. ಇದಲ್ಲದೇ ಗ್ರಾಮ ಮಟ್ಟದಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ದಿನಾಂಕ ನಿಗದಿಪಡಿಸಿಕೊಂಡು ಔಟ್ ರೀಚ್ ಸತ್ರಗಳನ್ನು ಹಮ್ಮಿಕೊಂಡು ನೀಡಲಾಗುತ್ತಿದೆ.

ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಒಳಪಟ್ಟ ವಿವಿಧ ಹಂತದ ಆರೋಗ್ಯ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಈ ಕೆಳಕಂಡ ಸೇವೆ ನೀಡಲಾಗುತ್ತಿದೆ.

1. ರಾಜ್ಯದಲ್ಲಿರುವ 6232 ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು ಹಾಗೂ 2530 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಾಥಮಿಕ ಹಂತದ ಚಿಕಿತ್ಸೆಗಳಾದ ಜ್ವರ, ನೆಗಡಿ, ಕೆಮ್ಮು ,ಲಸಿಕೆ ನೀಡುವುದು, ಮುಂತಾದ ಹೊರ ರೋಗಿಗಳ ಚಿಕಿತ್ಸೆಯನ್ನು ನೀಡಲಾಗುವುದು. ಈ ಪೈಕಿ 24*7 ಕಾರ್ಯನಿರ್ವಹಿಸುವ ಪಿ.ಹೆಚ್.ಸಿ ಗಳಲ್ಲಿ ಪ್ರಸೂತಿಗಳ ಸೇವೆಯನ್ನು ನೀಡಲಾಗುವುದು.

| | | |
|---|---|---|
| | | 2. 206 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಈ ಮೇಲೆ ತಿಳಿಸಿದ ಸೇವೆಗಳ ಜೊತೆಗೆ ಮೈನರ್ ಸರ್ಜರಿಗಳ ಸೇವೆಗಳನ್ನು ನೀಡಲಾಗುವುದು. ಈ ಸೇವೆ ನೀಡಲು ತಜ್ಞ ವೈದ್ಯರುಗಳಾದ ಗೈನಾಕಲಾಜಿಸ್ಟ್ ಅರವಳಿಕೆತಜ್ಞರು, ಮಕ್ಕಳತಜ್ಞರು, ಜನರಲ್ ಪಿಜಿಷಿಯನ್ ತಜ್ಞರ ಸೇವೆಯನ್ನು ನೀಡಲಾಗುವುದು.<br>3. ಸಾರ್ವಜನಿಕ ಆಸ್ಪತ್ರೆಗಳು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ದ್ವಿತೀಯ ಹಂತದ ಸೇವೆಗಳಾದ ರೋಗ ನಿರ್ಣಯ ಮಾಡಲು ಅಗತ್ಯ ಲ್ಯಾಬೋರೇಟರಿ ಸೌಲಭ್ಯ, ರೇಡಿಯಾಲಜಿ, ಮಾನಸಿಕ ರೋಗಿಗಳ ಚಿಕಿತ್ಸೆ, ಜನರಲ್ ಸರ್ಜರಿ, ರೇಡಿಯಾಲಜಿ ವಿಭಾಗದ ಸೇವೆಗಳಾದ ಸ್ಕ್ಯಾನಿಂಗ್, ಕಣ್ಣಿನ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ, ದಂತ ವೈದ್ಯರ ಸೇವೆ, ಚರ್ಮರೋಗ ತಜ್ಞರ ಸೇವೆ, ಡಯಾಲಿಸಿಸ್ ಸೌಲಭ್ಯ, ವೆಂಟಿಲೇಟರ್ ಸಹಿತ ಐ.ಸಿ.ಯು ಸೌಲಭ್ಯವನ್ನು ಒದಗಿಸಲಾಗುತ್ತದೆ.<br><br>ಡಯಾಲಿಸಿಸ್ ರೋಗಿಗಳಿಗೆ ರಾಜ್ಯಾದ್ಯಂತ 169 ಡಯಾಲಿಸಿಸ್ ಕೇಂದ್ರಗಳಲ್ಲಿ (ಜಿಲ್ಲಾಆಸ್ಪತ್ರೆ, ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ) ಉಚಿತವಾಗಿ ಡಯಾಲಿಸಿಸ್ ಸೇವೆಗಳನ್ನು ಪಿ.ಪಿ.ಪಿ ಮಾದರಿಯಲ್ಲಿ ಡಯಾಲಿಸಿಸ್ ಸೇವೆಯನ್ನು ನೀಡಲಾಗುತ್ತಿದೆ. |
| ಆ | ರಾಜ್ಯದ ಯಾವ ಆಸ್ಪತ್ರೆಗಳಲ್ಲಿ MRI SCANNING, ULITRA SOUND SCANNING DIALYSIS ಹಾಗೂ ಇತರೆ ಪರೀಕ್ಷೆಗಳ ವ್ಯವಸ್ಥೆ ಇದೆ; ಇವುಗಳನ್ನು ಹೇಗೆ ನಿರ್ವಹಣೆ ಮಾಡಲಾಗುತ್ತಿದೆ; ನಿರ್ವಹಣೆ ಗುತ್ತಿಗೆ ಪಡೆದ ಸಂಸ್ಥೆಗಳಾವುವು; ಪಾವತಿ ಮಾಡುತ್ತಿರುವ ಮೊತ್ತ ಎಷ್ಟು; ನಿರ್ವಹಣೆಗೆ ನಿಯೋಜಿಸಲ್ಪಟ್ಟ ಸಿಬ್ಬಂದಿಗಳ ಸಂಖ್ಯೆಯೆಷ್ಟು; ಸದರಿ ಯಂತ್ರಗಳ ಸಾಮಾರ್ಥ್ಯ ಹಾಗೂ ಪ್ರತಿದಿನ ಅದನ್ನು ಬಳಸುತ್ತಿರುವ ಫಲಾನುಭವಿಗಳ ಅಂಕಿ ಸಂಖ್ಯೆ ಸಹಿತ ಆರೋಗ್ಯ ಸಂಸ್ಥೆವಾರು, ಗುತ್ತಿಗೆ ಸಂಸ್ಥೆವಾರು ಹಾಗೂ ಸೌಲಭ್ಯವಾರು ವಿವರ ನೀಡುವುದು: | ರಾಷ್ಟ್ರೀಯ ಆರೋಗ್ಯ ಅಭಿಯಾನದ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದಡಿಯಲ್ಲಿ MRI Scanning ಸೇವೆಗಳನ್ನು ಸರ್ಕಾರಿ ಖಾಸಗಿ ಸಹಭಾಗಿತ್ವದ (PPP) ಮಾದರಿಯಲ್ಲಿ ಜಿಲ್ಲಾ ಆಸ್ಪತ್ರೆಗಳಲ್ಲಿ ಒದಗಿಸಲಾಗುತ್ತಿದೆ. MRI Scanning ಗೆ ಸಂಬಂಧಿಸಿದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.<br><br>ರಾಜ್ಯದಲ್ಲಿ ಪಿಪಿಪಿ ಮಾದರಿಯಲ್ಲಿ ಒಟ್ಟು 168 ಡಯಾಲಿಸಿಸ್ ಕೇಂದ್ರಗಳಲ್ಲಿ (ಜಿಲ್ಲಾ ಆಸ್ಪತ್ರೆ-21 ಮತ್ತು ತಾಲ್ಲೂಕು ಆಸ್ಪತ್ರೆಗಳು-147) ಕಾರ್ಯನಿರ್ವಹಿಸಲಾಗುತ್ತಿದೆ.<br><br>ಪ್ರತಿ ಡಯಾಲಿಸಿಸ್ ಸೈಕಲ್‌ಗೆ 1150/- ರೂಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಂದ ಡಯಾಲಿಸಿಸ್ ಸೈಕಲ್‌ಗಳ ಪ್ರತಿ ಮಾಹಿತಿ ಪಡೆದು ದಿನಾಂಕ: 30.09.2023ರವರೆಗೆ ವರದಿಯನ್ನು DSO-District Surveillance officer ರವರ ಮುಖಾಂತರ ದೃಢೀಕರಿಸಿ ನಂತರ ಸಂಸ್ಥೆಯವರಿಗೆ ಪಾವತಿಸಲಾಗುತ್ತಿತ್ತು.<br><br>ದಿನಾಂಕ: 01.10.2023 ರಿಂದ 122 ಡಯಾಲಿಸಿಸ್ ಕೇಂದ್ರಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆಯವರ ಮೂಲಕ ಡಯಾಲಿಸಿಸ್ ಸೇವೆಯ ಕಾರ್ಯನಿರ್ವಹಿಸಲಾಗುತ್ತಿದೆ. |

| | | |
|---|---|---|
| | | 46 ಡಯಾಲಿಸಿಸ್ ಕೇಂದ್ರಗಳನ್ನು M/s ESKAG ಸಂಸ್ಥೆಯವರು ಕಾರ್ಯನಿರ್ವಹಿಸುತ್ತಿದ್ದಾರೆ.<br><br>ತಾಯಿ ಆರೋಗ್ಯ ಕಾರ್ಯಕ್ರಮದಡಿಯಲ್ಲಿ 47 ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳಿಗೆ Ultra Sound Scanning ಯಂತ್ರಗಳನ್ನು ನೀಡಲಾಗಿದ್ದು, ಸದರಿ ಯಂತ್ರಗಳನ್ನು ಸಂಬಂಧಿಸಿದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳಲ್ಲಿ ಇಲಾಖಾ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ. |
| ಇ | ಈ ಮೇಲಿನ ಪರೀಕ್ಷೆಗಳಿಗಾಗಿ ಆಸ್ಪತ್ರೆಗಳಲ್ಲಿ ಶುಲ್ಕ ವಿಧಿಸಲಾಗುತ್ತಿದೆಯೇ: ವಿಧಿಸಲಾಗುತ್ತಿದ್ದಲ್ಲಿ ಶುಲ್ಕದ ದರಗಳ ಪಟ್ಟಿಯನ್ನು ಒದಗಿಸುವುದು: ಕೆಲವು ಆಸ್ಪತ್ರೆಗಳಲ್ಲಿ ಉಪಕರಣಗಳು ಲಭ್ಯವಿದ್ದರೂ, ಖಾಸಗಿ ತಪಾಸಣಾ ಕೇಂದ್ರಗಳಿಗೆ ಚೀಟಿ ನೀಡಿ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಬಗ್ಗೆ ಸ್ವೀಕರಿಸಲಾದ ದೂರುಗಳೆಷ್ಟು: ಇಲಾಖೆ ಕೈಗೊಂಡ ಕ್ರಮಗಳೇನು: (ವಿವರ ನೀಡುವುದು) | ರಾಷ್ಟ್ರೀಯ ಆರೋಗ್ಯ ಅಭಿಯಾನದ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದಡಿಯಲ್ಲಿ MRI Scanning ಸೇವೆಗಳನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಎಲ್ಲಾ ಫಲಾನುಭವಿಗಳಿಗೆ ಉಚಿತವಾಗಿ ಒದಗಿಸಲಾಗುತ್ತಿದೆ.<br><br>ಡಯಾಲಿಸಿಸ್ ಸೇವೆಯನ್ನು APL ಹಾಗೂ BPL ರೋಗಿಗಳಿಗೆ ಉಚಿತವಾಗಿ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ನೀಡಲಾಗುತ್ತಿದೆ.<br><br>ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ.<br><br>Ultra Sound Scanning ಗಾಗಿ ಶುಲ್ಕವನ್ನು ವಿಧಿಸಲಾಗುತ್ತಿಲ್ಲ. |
| ಈ | ಎಷ್ಟು MRI SCANNING, ULTRA SOUND SCANNING DIALYSIS ಯಂತ್ರಗಳನ್ನು ಯಾವ ಆಸ್ಪತ್ರೆಗಳಿಗೆ ಎಷ್ಟು ಪ್ರಮಾಣದಲ್ಲಿ ಒದಗಿಸಲಾಗಿದೆ: ಆಸ್ಪತ್ರೆಗಳಲ್ಲಿ ಉಪಕರಣಗಳು ಲಭ್ಯವಿದ್ದರೂ. ಸೂಕ್ತ ಸಿಬ್ಬಂದಿಗಳನ್ನು ನೇಮಿಸದೇ ಉಪಕರಣಗಳು ಹಾಳಾಗುತ್ತಿರುವುದು ಹಾಗೂ ರೋಗಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ? | MRI Scanning ಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಆರೋಗ್ಯ ಅಭಿಯಾನದ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ ಯಂತ್ರಗಳನ್ನು ಒದಗಿಸಿರುವುದಿಲ್ಲ.<br><br>ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ MRI- Scanning ಸೇವೆಗಳನ್ನು ಸರ್ಕಾರಿ ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿಯಲ್ಲಿ ಜಿಲ್ಲಾ ಆಸ್ಪತ್ರೆಗಳ ಒದಗಿಸಲಾಗುತ್ತಿದೆ.<br><br>ಪಿ.ಪಿ.ಪಿ. ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸದರಿ ಸಂಸ್ಥೆಯವರ ವತಿಯಿಂದ ತಾಲ್ಲೂಕು ಆಸ್ಪತ್ರೆಗಳಲ್ಲಿ 02 ರಿಂದ 06 ಡಯಾಲಿಸಿಸ್ ಯಂತ್ರಗಳನ್ನು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ 10 ರಿಂದ 13 ಡಯಾಲಿಸಿಸ್ ಯಂತ್ರಗಳು ಕಾರ್ಯನಿರ್ವಹಿಸುತ್ತಿವೆ.<br><br>ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ ಹಾಗೂ ಹೊಸದಾಗಿ ದಿನಾಂಕ: 27.06.2023ರಂದು ಹೊಸ ಡಯಾಲಿಸಿಸ್ ಟೆಂಡರ್‌ನ್ನು ಪ್ರಚೂರ ಪಡಿಸಲಾಗಿದೆ.<br><br>ಮೈಸೂರು ಮತ್ತು ಬೆಂಗಳೂರು ವಿಭಾಗದ ಡಯಾಲಿಸಿಸ್ ಟೆಂಡರನ್ನು ಈಗಾಗಲೇ ಆಹ್ವಾನಿಸಿದ್ದು, ಆಯ್ಕೆಗೊಂಡ ಸಂಸ್ಥೆಯವರೊಂದಿಗೆ MOU ಮಾಡಿಕೊಳ್ಳಲು ಕ್ರಮಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | ಬೆಳಗಾವಿ ವಿಭಾಗದ ಡಯಾಲಿಸಿಸ್ ಟೆಂಡರ್‌ನ್ನು ಆಯ್ಕೆಗೊಂಡ ಸಂಸ್ಥೆಗೆ Letter of acceptance ಗೆ ನೀಡಲಾಗಿದೆ.<br><br>ಕಲಬುರಗಿ ವಿಭಾಗದ ಡಯಾಲಿಸಿಸ್ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ನಿಯಮಾನುಸಾರ ಅಂತಿಮಗೊಳಿಸಬೇಕಾಗಿದೆ.<br><br>ತಾಯಿ ಆರೋಗ್ಯ ಕಾರ್ಯಕ್ರಮದಡಿಯಲ್ಲಿ 47 ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳಿಗೆ Ultra Sound Scanning Machine ಗಳನ್ನು ಒದಗಿಸಲಾಗಿದ್ದು ಅವುಗಳು ಕಾರ್ಯನಿರ್ವಹಿಸುತ್ತಿರುತ್ತವೆ ( 47 ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳ ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ). |

**ಆಕುಕ 71 ಎಸ್‌ಎಂಎಂ 2023**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

# ಅನುಬಂಧ-1

ಕರ್ನಾಟಕ ಸರ್ಕಾರದ ಅದೇಶ ಸಂಖ್ಯೆ: ಆಕುಕ 27 ಎಫ್.ಪಿ.ಆರ್.2018 ಬೆಂಗಳೂರು, ದಿನಾಂಕ:17-03-2018 ರನ್ವಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 6 ಜಿಲ್ಲಾ ಆಸ್ಪತ್ರೆಗಳಲ್ಲಿ ಎಂ ಆರ್ ಐ ಸ್ಕ್ಯಾನ್ ಸೇವೆಗಳನ್ನು ಪಿಪಿಪಿ ಮಾದರಿಯಲ್ಲಿ ಒದಗಿಸಲಾಗುತ್ತಿದೆ. ಆಸ್ಪತ್ರೆಗಳ ವಿವರ ನಿರ್ವಹಣೆ ಗುತ್ತಿಗೆ ಪಡೆದ ಸಂಸ್ಥೆಗಳ ವಿವರ ಹಾಗೂ ಪಾವತಿ ಮಾಡುತ್ತಿರುವ ಮೊತ್ತದ ವಿವರಗಳನ್ನು ಕೆಳಗಿನ ಕೋಷ್ಟಕಗಳಲ್ಲಿ ನಮೂದಿಸಿದೆ.

## ಕೋಷ್ಟಕ-1

| MRI Scan Services | | | | | | |
|---|---|---|---|---|---|---|
| Sl .no | District Name | Name of the Public Health Facility | Service provider name | Date of Signing the Contract | Operation Started Period | Contract Period |
| 1 | Kolar | District Hospital, Kolar | Krsnaa Diagnostic Ltd Pune | 24/5/2017 | Mar-2019 | 10 Years |
| 2 | Tumkur | District Hospital, Tumkur | Krsnaa Diagnostic Ltd Pune | 24/5/2017 | May-2019 | |
| 3 | Vijapura | District Hospital, Vijapura | Krsnaa Diagnostic Ltd Pune | 24/5/2017 | Jan-2019 | |
| 4 | Chitradurga | District Hospital, Chitradurga | Krsnaa Diagnostic Ltd Pune | 24/5/2017 | Mar-2019 | |
| 5 | Udupi | District Hospital, Udupi | Krsnaa Diagnostic Ltd Pune | 24/5/2017 | Jan-2021 | |
| 6 | Gadag | District Hospital, Gadag | K.V Hanchinal Gadag | 27/3/2019 | Sep-2019 | |

## ಕೋಷ್ಟಕ-2

| Sl. No | Name of the services Provider | Price per MRI Scan | | |
|---|---|---|---|---|
| | | State Govt Share (Amount in Rs.) | NHM Share (Amount in Rs.) | Total in Rs. |
| 1 | M/s KRSNNA Diagnostic Pvt Ltd | 600 | 2400 | 3000 |
| 2 | M/s K.V Hanchinal Gadag | 300 | 2400 | 2700 |

ಎಂ ಆರ್ ಐ ಸೇವಗಳನ್ನು ಪ್ರತಿ ದಿನ ಬಳಸುತ್ತಿರುವ ಫಲಾನುಭವಿಗಳ ಸರಾಸರಿ ಅಂಕಿ ಸಂಖ್ಯೆಗಳ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

## ಕೋಷ್ಟಕ-3

| MRI Scan Services | | | | | |
|---|---|---|---|---|---|
| **Sl .no** | **District Name** | **Name of the Public Health Facility** | **Service provider name** | **Total No of MRI Scans conducted in FY- 2023-24 ( From April-2023 to August-2023)** | **Average No of MRI Scan conducted per day** |
| 1 | Kolar | District Hospital, Kolar | Krsnaa Diagnostic Ltd Pune | 7443 | 48 |
| 2 | Tumkur | District Hospital, Tumkur | Krsnaa Diagnostic Ltd Pune | 8753 | 57 |
| 3 | Vijapura | District Hospital, Vijapura | Krsnaa Diagnostic Ltd Pune | 8840 | 58 |
| 4 | Chitradurga | District Hospital, Chitradurga | Krsnaa Diagnostic Ltd Pune | 11115 | 73 |
| 5 | Udupi | District Hospital, Udupi | Krsnaa Diagnostic Ltd Pune | 1266 | 8 |
| 6 | Gadag | District Hospital, Gadag | K.V Hanchinal Gadag | 6652 | 43 |

MRI Scanning ಸೇವೆಗಳನ್ನು ಸರ್ಕಾರಿ ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿಯಲ್ಲಿ ಒದಗಿಸುತ್ತಿದ್ದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಸದರಿ ಸೇವೆಗಳ ನಿರ್ವಹಣೆಗೆ ಸಿಬ್ಬಂದಿಗಳ ನಿಯೋಜನೆ ಮಾಡಿರುವುದಿಲ್ಲಾ.

ಮುಂದುವರೆದು, ಆರ್ಥಿಕ ಸಾಲು -2023-24 ರ ರಾಷ್ಟ್ರೀಯ ಆರೋಗ್ಯ ಅಭಿಯಾನದ ಅನುಮೋದಿತ ಆರ್‌ಒಪಿ ರಲ್ಲಿ ಉಚಿತ ರೋಗ ಪತ್ತೆ ಕಾರ್ಯಕ್ರಮದ ಅಡಿಯಲ್ಲಿ 15 ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಎಂಆರ್‌ಐ ಸೇವೆಗಳನ್ನು ಹೆಚ್ಚುವರಿಯಾಗಿ ಒದಗಿಸಲು ಅನುಮೋದನೆ ನೀಡಲಾಗಿದೆ. (ಸರ್ಕಾರದ ಆದೇಶ ಸಂಖ್ಯೆ: ಆಕುಕ 160 ಎಫ್ ಪಿ ಆರ್ 2022 ಬೆಂಗಳೂರು, ದಿನಾಂಕ:19.08.2023)

ಈ ಕೆಳಕಂಡ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಎಂಆರ್‌ಐ ಸೇವೆಗಳನ್ನು ಸರ್ಕಾರಿ ಖಾಸಗಿ ಸಹಭಾಗಿತ್ವದಲ್ಲಿ (PPP) ಹೆಚ್ಚುವರಿಯಾಗಿ ಒದಗಿಸಲು ತಿರ್ಮಾನಿಸಲಾಗಿದೆ.

## ಕೋಷ್ಟಕ-4

**List of Public Health Facilities for extension of 15 MRI Scan services in Public Private Partnership (PPP) mode**

| Sl NO | District name | Name of the Public Health Facility |
|---|---|---|
| 1 | Bangalore Urban | Jayanagara General Hospital, Bengaluru |
| 2 | Chikkamagaluru | District Hospital, Chikkamagaluru |
| 3 | Davanagere | District Hospital, Davanagere |
| 4 | Bagalkote | District Hospital, Bagalkote |
| 5 | Dharawada | District Hospital, Dharawada |
| 6 | Haveri | District Hospital, Haveri |
| 7 | Ramanagar | District Hospital, Ramanagar |
| 8 | Yadgiri | District Hospital, Yadgiri |
| 9 | Mysore | District Hospital, Mysore |
| 10 | Dakshina Kannada | Wenlock District Hospital, Mangalore |
| 11 | Bangalore Urban | C V Raman General Hospital, Indiranagar, Bangalore |

| | | |
|---|---|---|
| 12 | Bangalore Urban | K C General Hospital, Malleswaram, Bangalore |
| 13 | Belagavi | Sub Division District Hospital, Chikkodi |
| 14 | Hassan | Sub Division District Hospital, Arisikerae |
| 15 | Vijayanagara | Dist rict Hospital, Vijayanagara |

ಅನುಬಂಧ -2

## USG MACHINE supplied under Maternal Health

| Sl No | Name of the Facilities | Qnty |
|---|---|---|
| 1 | OICU/HDU, Raichur Institute of Medical Sciences , Raichur, | 1 |
| 2 | OICU/HDU, Cheluvamba Hospital, Mysuru | 1 |
| 3 | OICU/HDU, Women And Children Hospital Davanagere, | 1 |
| 4 | OICU/HDU, Belagavi Institute of Medical Sciences, Belagavi | 1 |
| 5 | OICU/HDU, Kalaburagi Institute of Medical Sciences, Kalburgi | 1 |
| 6 | OICU/HDU, District Hospital, Koppala | 1 |
| 7 | OICU/HDU, District Hospital, Vijayapura | 1 |
| 8 | OICU/HDU, District Hospital, Bagalkote | 1 |
| 9 | OICU/HDU, District Hospital Yadgiri | 1 |
| 10 | OICU/HDU, District Hospital Bidar | 1 |
| 11 | OICU/HDU, District Hospital Gadag, | 1 |
| 12 | OICU/HDU, District Hospital, Haveri | 1 |
| 13 | OICU/HDU, District Hospital Chikmagaluru | 1 |
| 14 | OICU/HDU, Karnataka Institute of Medical Sciences Hubli, | 1 |
| 15 | OICU/HDU, Hassan Institute of Medical Sciences, Hassan | 1 |
| 16 | OICU/HDU, Shivamoga Institute of Medical Sciences,Shivamoga | 1 |
| 17 | Mother & Child Hospital, District Hospital Chitradurga | 1 |
| 18 | Mother & Child Hospital, HD Kote , Mysore District | 1 |
| 19 | Mother & Child Hospital, Manvi Raichur | 1 |
| 20 | Mother & Child Hospital, Gangavathi , Koppala District | 1 |
| 21 | Mother & Child Hospital, Nippani, Belagavi District. | 1 |
| 22 | Mother & Child Hospital, Chikkodi , Belagavi District. | 1 |
| 23 | Mother & Child Hospital, Koppala , Koppal Distrct. | 1 |
| 24 | Mother & Child Hospital, SMT Hospital, JLB Road KM Puram Mysuru-570004 | 1 |
| 25 | Mother & Child Hospital, Sira,Tumakuru ,Tumkur District. | 1 |
| 26 | Mother & Child Hospital, Vantamuri Colony, Near Sai Mandir, Belagavi – 590016 | 1 |
| 27 | Mother & Child Hospital,SNR District Hospital Kolar , Kolar District. | 1 |
| 28 | Mother & Child Hospital, Malavalli, Mandya District. | 1 |
| 29 | Mother & Child Hospital, Kukkanoor . Koppal District. | 1 |
| 30 | Mother & Child Hospital, Kanakapura, Ramanagara District. | 1 |
| 31 | Mother & Child Hospital, Dharwad , Dharwad District. | 1 |
| 32 | District Surgeon, Mother & Child Hospital, Dharwad | 1 |
| 33 | District Surgeon, Mother & Child Hospital, District Hospital Campus, Davangere, | 1 |
| 34 | Administrative Medical Officers, Mother & Child Hospital, Koppa Chikkamagaluru District. | 1 |
| 35 | Administrative Medical Officers, Mother & Child Hospital, chintamani,Chikkaballapura | 1 |
| 36 | Administrative Medical Officers, Mother & Child Hospital, Holalkere, Chitradurga District. | 1 |

| | | |
|---|---|---|
| 37 | Administrative Medical Officers, Mother & Child Hospital, Jewargi, Kalaburagi District, | 1 |
| 38 | Administrative Medical Officers, Mother & Child Hospital,Mundaragi, Gadag District, | 1 |
| 39 | Administrative Medical Officers, Mother & Child Hospital, Dandeli, Uttarakannda District, | 1 |
| 40 | Administrative Medical Officers, Mother & Child Hospital, Nayakanahatti 30 Bed, Chitradurga Distrct | 1 |
| 41 | Medical Superintendent, Govt Mother & Child Hospital Lady Ghoshen(60 bed),Opposite to Town Hall, Maidan Road , Hampankatta, Mangalore, Dashina Kannada | 1 |
| 42 | Administrative Medical Officer, Govt Mother &Child Hospital, Pavagada (60 bed), Tumkur District, | 1 |
| 43 | Administrative Medical Officer, Govt Mother &Child Hospital, Taluka General hospital campus hanamageri street Dharwad road, Soundatti ( 60 bed), Belagavi | 1 |
| 44 | Administrative Govt Medical Officer Mother &Child Hospital, Taluk General Hospital Capmus Jamakhandi (100 Bed), Bagalkote, | 1 |
| 45 | Administrative Medical Officer, Govt Mother &Child Hospital, Shikaripura (100 bed), Shivamogga. | 1 |
| 46 | District Surgeon, Govt Mother &Child Hospital,(100 bed) Sangam circle, Ananthpur road, Ballari | 1 |
| 47 | District Health officer,Govt Mother &Child Hospital, Kalaburagi 100 bed: | 1 |
| | **Total** | **47** |